ಕರ್ನಾಟಕ ಸರ್ಕಾರ

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಶೇಷ ವಿಭಾಗ, ರಾಮನಗರ.

Phone/ Fax: e-mail : eepwdspldnrng@gmail.com

ಸಂಖ್ಯೆ :ಕಾ.ಅ/ಲೋ.ಇ/ರಾ.ವಿ.ವಿ/ರಾಮನಗರ/ಸ.ಇಂ-1/O.F.C/2020-21. 394 ದಿನಾಂಕ: 23 JUN 2020.

ರವರಿಗೆ,

Telesonic Network Limited
# No 55, Divyashree towers,
Banneraghatta Road ,
Bangalore-560029.

ಮಾನ್ಯರೆ,

ವಿಷಯ:- ರಸ್ತೆ ಬದಿಯಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಸಲು ಅನುಮತಿ ಕೋರಿರುವ ಬಗ್ಗೆ.

ಉಲ್ಲೇಖ:- 1). ತಮ್ಮ ಕಛೇರಿಯ ಅರ್ಜಿ ಸಂಖ್ಯೆ: TNL/OFC/ROW/TNAP border/PWD/0211. ದಿನಾಂಕ: 03-12-2019..
2). ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ. ಉಪ ವಿಭಾಗ, ಕನಕಪುರ ರವರ ಪತ್ರ ಸಂಖ್ಯೆ:1189, ದಿ: 10-03-2020.
3). ಈ ಕಛೇರಿ ಪತ್ರದ ಸಂಖ್ಯೆ: 2459/2019-20. ದಿನಾಂಕ: 20-03-2019.
4). ತಮ್ಮ ಕಛೇರಿಯ ಪತ್ರದ ದಿನಾಂಕ: 22-06-2020.

*_*_*_*_*_*_*_*_*_*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, 1) Estimate for laying OFC (Optical Fiber Cable) from Hosadurga to Hunasanahalli SH-3 road from ch:3.50km to 7.00km in Kanakapura tq. 2) Estimate for laying OFC (Optical Fiber Cable) from Hunasanahalli to Gattigunda MDR road from ch: 24.80km to 35.30km in Kanakapura tq. 3) Estimate for laying OFC (Optical Fiber Cable) from Gattigunda to Kolagondanahalli TNAP MDR road from ch:10.00 km to 16.00 km in Kanakapura tq. ಸದರಿ ರಸ್ತೆಯು ಲೋ,ಇ ನಂ.3 ಉಪವಿಭಾಗ ಕನಕಪುರ ವ್ಯಾಪ್ತಿಗೆ ರಸ್ತೆ ಬರುತ್ತಿದ್ದು ಸದರಿ ರಸ್ತೆಯಲ್ಲಿ Telesonic Network Limited ಸಂಸ್ಥೆ ವತಿಯಿಂದ OFC (Optical Fiber Cable) ಅಳವಡಿಸಲು ಉಲ್ಲೇಖ (1)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಲೋಕೋಪಯೋಗಿ ಇಲಾಖೆ, ನಂ.3 ಉಪವಿಭಾಗ ಕನಕಪುರ ರವರನ್ನು ಕೋರಿದ್ದು, ಉಲ್ಲೇಖ (2)ರ ಪತ್ರದಲ್ಲಿ ಸದರಿ ರಸ್ತೆ ಬಗ್ಗೆ ಮಾಹಿತಿಯನ್ನು ನೀಡಲು ತಿಳಿಸಲಾಗಿತ್ತು,

1). laying OFC (Optical Fiber Cable) from Hosadurga to Hunasanahalli SH-3 road from ch:3.50km to 7.00km in Kanakapura tq. 2). laying OFC (Optical Fiber Cable) from Hunasanahalli to Gattigunda MDR road from ch: 24.80km to 35.30km in Kanakapura tq. 3).laying OFC (Optical Fiber Cable) from Gattigunda to Kolagondanahalli TNAP MDR road from ch:10.00 km to 16.00 km in Kanakapura tq ರಸ್ತೆಯಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಸಿ ಯಥಾಸ್ಥಿತಿಗೆ ತರುವ ಕಾಮಗಾರಿಗೆ ರೂ. 56.92 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಷರತ್ತುಗಳನ್ವಯ ಅನುಮೋದನೆ ನೀಡಬಹುದಾಗಿರುತ್ತದೆ ಎಂದು ಉಲ್ಲೇಖ (2)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ., ಉಪವಿಭಾಗ, ಕನಕಪುರ ರವರು ತಿಳಿಸಿರುತ್ತಾರೆ.

<u>ಷರತ್ತುಗಳು:-</u>

1. **ಸದರಿ ಕಾಮಗಾರಿಯ ರಸ್ತೆಗಳಲ್ಲಿ ಶೋಲ್ಡರ್ ನಿಂದ ಹೊರಭಾಗದಲ್ಲಿ OFC ಕೇಬಲ್ ಅಳವಡಿಸಲು ಮಾತ್ರ ರಸ್ತೆಯನ್ನು ಯಂತ್ರದ ಸಹಾಯದಿಂದ 1.2 M ಆಳಕ್ಕೆ ಅಗೆಯತಕ್ಕದ್ದು.**
2. **ರಸ್ತೆಯನ್ನು ಅಗೆದು, ಓ.ಎಫ್.ಸಿ. ಕೇಬಲ್ ಅಳವಡಿಸಿದ ನಂತರ ಅಗೆದ ಭಾಗವನ್ನು ಮರು ಭರ್ತಿ ಮಾಡುವಾಗ ಸರಿಯಾದ ರೀತಿಯಲ್ಲಿ ನೀರುಣಿಸಿ ಗಟ್ಟಿ ಮಾಡತಕ್ಕದ್ದು.**

3. ಅಗೆದ ಭಾಗಗಳಲ್ಲಿ ತಗ್ಗುಗಳನ್ನು ಉತ್ತಮ ಗುಣಮಟ್ಟದ ಅನುಮೋದಿತ ಡಬ್ಲ್ಯೂ.ಎಂ.ಎಂ. ನಿಂದ ಭರ್ತಿ ಮಾಡಿ ಮೇಲ್ಮೈನ ಮಟ್ಟಕ್ಕೆ ತರತಕ್ಕದ್ದು.
4. ರಸ್ತೆ ಯಾವುದೇ ಸರಪಳಿಗಳಲ್ಲಿ ಅಗೆದ ಭಾಗಗಳಲ್ಲಿ ಕುಸಿತದಿಂದ ತಗ್ಗುಗಳುಂಟಾದಲ್ಲಿ ಅದನ್ನು ನಿಮ್ಮ ವತಿಯಿಂದಲೇ ಸರಿಪಡಿಸಿ ಮೂಲ ಮೇಲ್ಮೈನ ಮಟ್ಟಕ್ಕೆ ತರತಕ್ಕದ್ದು.
5. ಡಾಂಬರು ಮೇಲ್ಮೈಯಲ್ಲಿ ಕುಸಿತ ಅಥವಾ ತಗ್ಗುಗಳೇನಾದರೂ ಕಂಡುಬಂದಲ್ಲಿ ನಿಮ್ಮ ಸಂಸ್ಥೆಯ ವತಿಯಿಂದಲೇ ಸದರಿ ಭಾಗವನ್ನು ಸರಿಪಡಿಸತಕ್ಕದ್ದು
6. ಓ.ಎಫ್.ಸಿ. ಕೇಬಲ್ ಅಳವಡಿಸಲು ಅಗೆದ ಭಾಗಗಳಲ್ಲಿ ರಸ್ತೆಯ ಬದಿ ಅಥವಾ ತೋಳು ಚರಂಡಿಗಳೇನಾದರೂ ಹಾನಿ ಉಂಟಾದಲ್ಲಿ ಅಂತಹ ತೋಳು ಚರಂಡಿ ಅಥವಾ ಬದಿ ಚರಂಡಿಗಳನ್ನು ನಿಮ್ಮ ಸಂಸ್ಥೆಯ ವತಿಯಿಂದಲೇ ಸದರಿ ಭಾಗವನ್ನು ಸರಿಪಡಿಸತಕ್ಕದ್ದು.
7. ಅಗೆದ ಭಾಗಗಳನ್ನು ತುಂಬಲು ಅಗೆತದಿಂದ ಲಭ್ಯವಿರುವ ಮಣ್ಣು ಹಾಗೂ ಶೇಕಡ 40 ರಷ್ಟು ಹೊಸದಾದ ಅನುಮೋದಿತ ಗುಣಮಟ್ಟದ ಗ್ರಾವೆಲ್‌ನಿಂದ ತುಂಬಿ ಮೇಲ್ಮೈಯನ್ನು ಮೂಲ ಸ್ಥಿತಿಗೆ ತರತಕ್ಕದ್ದು.
8. ಸಂಬಂಧಪಟ್ಟ ಶಾಖಾಧಿಕಾರಿಗಳು ನೀಡುವ ನಿರ್ದೇಶನದಂತೆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು.
9. ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಹಾಗೂ ಪೂರ್ಣಗೊಳಿಸಿದ ನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ ನಂ.3 ಉಪ-ವಿಭಾಗ, ಕನಕಪುರ ರವರಿಗೆ ತಿಳಿಸತಕ್ಕದ್ದು.
10. ಮೇಲೆ ವಿಧಿಸಿರುವ ನಿಬಂಧನೆಗಳನ್ನು ಹಾಗೂ ಸರ್ಕಾರದೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದಲ್ಲಿನ ನಿಬಂಧನೆಗಳನ್ನು ಕಡ್ಡಾಯವಾಗಿ ಯಾವುದೇ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಹಾಗೂ ರಸ್ತೆ ಕತ್ತರಿಸಲು ನೀಡುವ ಅನುಮತಿಯನ್ನು ಯಾವುದೇ ಕಾರಣ ನೀಡದೆ ತಕ್ಷಣದಿಂದ ಹಿಂತೆಗೆದುಕೊಳ್ಳಲಾಗುವುದು.
11. ರಸ್ತೆ ಡ್ರಿಲ್ ಸಮಯದಲ್ಲಿ ಹಾಗೂ ಕೊರೆದ ಭಾಗವನ್ನು ತುಂಬುವ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಯಾವುದೇ ಮಾರ್ಪಾಟು ಮಾಡಿದ್ದಲ್ಲಿ ಅದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
12. ಸರ್ಕಾರದ ಅಥವಾ ಸರ್ಕಾರದ ಅಧೀನ ಸಂಸ್ಥೆಗಳಾದ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ದೂರವಾಣಿ ಸಂಪರ್ಕ ಇಲಾಖೆ ಇತ್ಯಾದಿ ಸಂಸ್ಥೆಗಳ ವತಿಯಿಂದ ರಸ್ತೆಯ ಪಕ್ಕದಲ್ಲಿ ಭೂಮಿಯನ್ನು ಅಗೆಯಬೇಕಾದ ಸಂದರ್ಭದಲ್ಲಿ ನಿಮ್ಮ ಸಂಸ್ಥೆಯಿಂದ ಅಳವಡಿಸಿರುವ ಕೇಬಲ್‌ನಿಂದ ಅಡಚಣೆಯೇನಾದರೂ ಉಂಟಾದಲ್ಲಿ ಸದರಿ ಕೇಬಲ್‌ಅನ್ನು ಸ್ಥಳಾಂತರಿಸಲು ಕೂಡಲೇ ನಿಮ್ಮ ವತಿಯಿಂದಲೇ ಕ್ರಮ ಕೈಗೊಳ್ಳತಕ್ಕದ್ದು.
13. ಸರ್ಕಾರದ ಯಾವುದೇ ಇಲಾಖೆಯ ಕಾಮಗಾರಿಗಳು ನಿರ್ವಹಿಸುವಲ್ಲಿ ನಿಮ್ಮ ವತಿಯಿಂದ ಅಳವಡಿಸಿರುವ ಕೊಳವೆಗೆ ದಕ್ಕೆಯುಂಟಾದಲ್ಲಿ ಇಲಾಖೆಯು ಜವಾಬ್ದಾರರಾಗುವುದಿಲ್ಲ.
14. ಕೇಬಲ್ ಅಳವಡಿಸಲು ರಸ್ತೆಯನ್ನು ಅಥವಾ ರಸ್ತೆಯಲ್ಲಿ ಕೊರೆಯುವಾಗ/ಪಕ್ಕದಲ್ಲಿ ಅಗೆಯುವಾಗ ಅಜಾಗರೂಕತೆಯಿಂದ ಉಂಟಾಗುವ ಯಾವುದೇ ರೀತಿಯ ಆಕಸ್ಮಿಕ ಘಟನೆಗಳಿಗೆ ಲೋಕೋಪಯೋಗಿ ಇಲಾಖೆಯು ಜವಾಬ್ದಾರರಾಗುವುದಿಲ್ಲ.
15. ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಸಂದಿಸುವ ಇತರೆ ಇಲಾಖೆಯ ಯಾವುದೇ ರಸ್ತೆಯನ್ನು ಅಗೆಯುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಲಿಖಿತ ರೂಪದಲ್ಲಿ ಅನುಮತಿಯನ್ನು ಪಡೆಯತಕ್ಕದ್ದು.
16. ಕಾಮಗಾರಿ ಸ್ಥಳದಲ್ಲಿ ನಿಮ್ಮ ಸಂಸ್ಥೆಯ ಜವಾಬ್ದಾರಿಯುತ ಸಿಬ್ಬಂದಿಯು ಹಾಜರಿರಬೇಕು ಹಾಗೂ ಇವರು ಸದರಿ ಕಾಮಗಾರಿಯನ್ನು ನಿರ್ವಹಿಸಲು ನೀಡಿರುವ ಅನುಮತಿ ಪತ್ರ ಹೊಂದಿರಬೇಕು ಹಾಗೂ ಅದರಲ್ಲಿನ ನಿಬಂಧನೆಗಳಂತೆ ಕೆಲಸಗಳನ್ನು ನಿರ್ವಹಿಸಬೇಕು.

17. ಓ.ಎಫ್.ಸಿ. ಕೇಬಲ್ ಅನ್ನು ಸೇತುವೆ ಮತ್ತು ಕಲ್ವರ್ಟ್‌ಗಳ ಮೇಲೆ ಹಾಕಿಸುವಾಗ ಹೆಚ್ಚಿನ ಜಾಗ್ರತೆಯನ್ನು ವಹಿಸತಕ್ಕದ್ದು ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ನೀಡುವ ನಿರ್ದೇಶನದಂತೆ ನಿರ್ವಹಿಸತಕ್ಕದ್ದು.

18. ಸಂಬಂಧಪಟ್ಟ ಕಾಮಗಾರಿ ಸ್ಥಳದ ಆರಕ್ಷಕ ಸಿಬ್ಬಂದಿಯವರಿಗೆ ಹಾಗೂ ಇತರೆ ಇಲಾಖೆಯವರಿಗೆ ಕೇಬಲ್ ಅಳವಡಿಸಲು ಮಾಹಿತಿಯನ್ನು ಸಲ್ಲಿಸತಕ್ಕದ್ದು ಹಾಗೂ ಸದರಿ ಇಲಾಖೆಯವರು ಸೂಚಿಸುವಂತಹ ನಿಯಮಗಳನ್ನು ಸಹಾ ಪಾಲಿಸುವ ಅಗತ್ಯವಿರುತ್ತದೆ.

19. ಕಾಮಗಾರಿಯು ಪೂರ್ಣವಾದ ನಂತರ ಲೋಕೋಪಯೋಗಿ, ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ ನಂ.3 ಉಪ-ವಿಭಾಗ, ಕನಕಪುರ ರವರಿಂದ ಎನ್.ಓ.ಸಿ. ಪಡೆಯತಕ್ಕದ್ದು.

20. ಕಾಮಗಾರಿಯನ್ನು 30 ದಿನಗಳ ಅವಧಿಯೊಳಗೆ ಪೂರ್ಣಗೊಳಿಸಲು ಷರತ್ತು ಒಳಪಡಿಸುವುದು.

**21. State Highway Act 1964 Chapter-3 clause 7(1) ರ ಅಡಿಯಲ್ಲಿ ರಾಜ್ಯ ಹೆದ್ದಾರಿ-3ರ ಹುಣಸನಹಳ್ಳಿ-ಚಿಕ್ಕಹಳ್ಳಿ ರಸ್ತೆ ಗಡಿ ಗುರುತಿಸುವ ಕಾರ್ಯ ಸರ್ಕಾರದ ಮುಂದಿರುವುದರಿಂದ, ರಸ್ತೆಯ ಮಧ್ಯಭಾಗದಿಂದ ಎರಡು ಇಕ್ಕೆಲಗಳಲ್ಲಿಯೂ 4.00 ಮೀಟರ್ ಅಂತರವನ್ನು ಬಿಟ್ಟು OFC (Optical Fiber Cable) ಅಳವಡಿಸುವ ಕಾರ್ಯವನ್ನು ಕೈಗೊಳ್ಳುವುದು.**

1). laying OFC (Optical Fiber Cable) from Hosadurga to Hunasanahalli SH-3 road from ch:3.50km to 7.00km in Kanakapura tq. 2). laying OFC (Optical Fiber Cable) from Hunasanahalli to Gattigunda MDR road from ch: 24.80km to 35.30km in Kanakapura tq. 3).laying OFC (Optical Fiber Cable) from Gattigunda to Kolagondanahalli TNAP MDR road from ch:10.00 km to 16.00 km in Kanakapura tq ರಸ್ತೆಯಲ್ಲಿ OFC ಅಳವಡಿಸಿ ಯಥಾಸ್ಥಿತಿಗೆ ತರುವ ಕಾಮಗಾರಿಗೆ ರೂ. **56.92** ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು OFC (Optical Fiber Cable) ಅಳವಡಿಸಲು ಮಾತ್ರ ಮೇಲೆ ತಿಳಿಸಿರುವ ಷರತ್ತುಗಳೊಂದಿಗೆ ಅನುಮೋದನೆ ನೀಡಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ.